ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ
ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ
**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004

# ನಗುಮುಖದ ದರ್ಶನವೇ ಸ್ವರ್ಗ

–ಶ್ರೀ ಸಿದ್ಧೇಶ್ವರ ಸ್ವಾಮಿಗಳು

ಭಕ್ತನಿರುವ ತಾಣವೆ ದೇವಲೋಕ, ಭಕ್ತನ ಅಂಗಳವೆ ಮಹಾಕಾಶಿ, ಭಕ್ತನ ಕಾಯವೆ ಕೈಲಾಸ, ನಗು ಮುಖದ ದರ್ಶನವೆ ಸ್ವರ್ಗ, ನಾವೆಲ್ಲ ಈ ಸುಂದರ ಜಗತ್ತಿನ ಯಾತ್ರಿಕರು, ಯಾತ್ರೆ ಮಾಡುವಾಗ ಅಲ್ಲಲ್ಲಿ ಸುಂದರವಾದ ನೋಟಗಳು, ಫಲಭರಿತ  ತೋಟಗಳು ಸಿಗುತ್ತವೆ. ಅವುಗಳನ್ನು ನೋಡುತ್ತ, ಅನುಭವಿಸುತ್ತ ಮುಂದೆ ಸಾಗಬೇಕು. ಜೀವನವನ್ನು ಪ್ರೀತಿಸುತ್ತಾ, ಅನುಭವಿಸುತ್ತಾ ಸಾಗಿದಾಗ ಮಾತ್ರ ಬದುಕು ದಿವ್ಯವಾಗುತ್ತದೆ. ಭೂಮಿ, ಮಳೆ, ನೀರು ಮತ್ತು ಆಹಾರವನ್ನು ಆ ಭಗವಂತ ನಮಗೆ ನೀಡಿದ್ದಾನೆ. ಪ್ರಕೃತಿಯಿಂದ ಪ್ರತಿಯೊಂದು ಸೌಲಭ್ಯವನ್ನು ಪಡೆದ ನಾವು ಭಾಗ್ಯವಂತರು ಎಂದು ಅರಿತು ಪ್ರತಿ ಕ್ಷಣದಲ್ಲೂ ಸಂತೋಷದ ಜೀವನ ನಡೆಸುವುದನ್ನು ಕಲಿಯಬೇಕು. ದೇವಲೋಕ, ಮರ್ತ್ಯಲೋಕ, ಸ್ವರ್ಗ–ನರಕ ಎಲ್ಲವೂ ಇಲ್ಲೆ ಇವೆ. ಇದು ಅನಂತ ಲೋಕಗಳ ಜಗತ್ತು. ಎಂದು ವಿಜಯಪುರದ ಜ್ಞಾನಯೋಗಾಶ್ರಮದ ನಿರಾಭಾರಿ ಚರಮೂರ್ತಿಗಳಾದ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು ಸುತ್ತೂರು ಶ್ರೀಕ್ಷೇತ್ರದಲ್ಲಿ ಇದೇ 9 ರಿಂದ ಪ್ರಾರಂಭವಾದ ತಾಂತ್ರಿಕ, ಆಯುರ್ವೇದ, ದಂತ ಮತ್ತು ಫಾರ್ಮಸಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಿರುವ ವ್ಯಕ್ತಿತ್ವ ವಿಕಸನ ಶಿಬಿರದಲ್ಲಿ ಪ್ರವಚನ ನೀಡುತ್ತಾ ತಿಳಿಸಿದರು.

ಶ್ರೀ ಹರೀಶ್ ಕೊಡೆಂದರರವರು, ನಿರ್ವಹಣೆಯು ಕಲೆ ಮತ್ತು ವಿಜ್ಞಾನ ಎರಡೂ ಆಗಿದೆ. ನಿರ್ವಾಹಕನು ವಿಜ್ಞಾನ ಹಾಗೂ ಅದನ್ನು ಅನ್ವಯಿಸುವ ಕಲೆ ಜ್ಞಾನ ಪಡೆಯಬೇಕು, ಆಗ ಅವನು ತನ್ನ ವೃತ್ತಿಯಲ್ಲಿ ಯಶಸ್ಸನ್ನು ಕಾಣುತ್ತಾನೆ. ಪ್ರತಿ ಕಲೆಯು ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಅಂಶಗಳನ್ನೊಳಗೊಂಡಿದೆ ಎಂದು ತಿಳಿಸಿದರು.

ಪ್ರೊ. ಎಂ. ಕೃಷ್ಣೇಗೌಡರವರು, ಸಂವಹನಕ್ಕಾಗಿ ಮಾತನ್ನು ಬಳಸಿಕೊಳ್ಳುವ ಮಾಧ್ಯಮಗಳು ಹಲವು, ಇವುಗಳನ್ನು ಸ್ಥೂಲವಾಗಿ ಶ್ರವ್ಯ ಮತ್ತು ದೃಶ್ಯ ಮಾಧ್ಯಮ ಎಂದು ವಿಂಗಡಿಸಿದೆ. ಈ ಎರಡು ಸಾಧ್ಯತೆಗಳನ್ನು ವೈವಿಧ್ಯಮಯವಾಗಿ ಬಳಸಿಕೊಂಡು ಕಥಾಕಾಲಕ್ಷೇಪ, ರಂಗನಾಟಕ, ರೇಡಿಯೋ, ದೂರದರ್ಶನ ಇತ್ತೀಚಿನ ನವೀನ ಮಾಧ್ಯಮಗಳ ಹತ್ತು ಹಲವು ಸಂವಹನ ಪ್ರಕಾರಗಳು ಮೂಡಿಬಂದಿವೆ. ಒಬ್ಬ ಉತ್ತಮ ಮಾತುಗಾರನಾಗಬೇಕಾದರೆ ಮೊದಲು ಒಬ್ಬ ಸಕ್ರೀಯವಾಗಿ ಆಲಿಸುವವನಾಗಿರಬೇಕು ಎಂದು ತಿಳಿಸಿದರು.

ಬೆಳಗಿನ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗಿ, ನಂತರ ಯೋಗ ಪ್ರಾಣಾಯಾಮ ನಡೆಯಿತು. ಸಂಜೆ ದೇಶಿಯ ಆಟಗಳನ್ನು ವ್ಯವಸ್ಥೆ ಮಾಡಲಾಗಿತ್ತು.




ಸುತ್ತೂರು ಶ್ರೀಕ್ಷೇತ್ರದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ವತಿಯಿಂದ ತಾಂತ್ರಿಕ, ಆಯುರ್ವೇದ, ದಂತ, ಫಾರ್ಮಸಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಿರುವ ವ್ಯಕ್ತಿತ್ವ ವಿಕಸನ ಶಿಬಿರದಲ್ಲಿ ವಿಜಯಪುರದ ಜ್ಞಾನಯೋಗಾಶ್ರಮದ ನಿರಾಭಾರಿ ಚರಮೂರ್ತಿಗಳಾದ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು ಪ್ರವಚನ ನೀಡುತ್ತಿರುವುದು.